ಮಾಡಿಕೊಡುವುದು ಗೊತ್ತು. ನಿರ್ಮಾಪಕರ ಆಯ್ಕೆ ನಾನೇ ಮಾಡಿಕೊಳ್ತೀನಿ. ಮತ್ಯಾರೋ ನನ್ನನ್ನು ಸೆಲೆಕ್ಟ್ ಮಾಡಿಕೊಳ್ಳುವ ಹಾಗೆ ಲೈಫಲ್ಲಿ ನಾನು ಮಾಡಿಕೊಳ್ಳಲ್ಲ. ನನ್ನ ಜೀವನದಲ್ಲಿ ನನ್ನ ನಿರ್ಮಾಪಕರನ್ನು ನಾನೇ ಆಯ್ಕೆ ಮಾಡಿಕೊಳ್ಳಲು ಸಾಧ್ಯವಿರುವವರೆಗೆ ಮಾತ್ರ ನಾನು ಸಿನಿಮಾ ಮಾಡ್ತೀನಿ.

ಈ ಕ್ಷಣದಿಂದ ನಾನು ನಿರ್ದೇಶಕ ಅಲ್ಲ ಅಂದರೂ ಈ ಬದುಕನ್ನು ಬದುಕೋದು ನನಗೆ ಗೊತ್ತು. ನನಗೆ ಗೊತ್ತಿರುವ ಚಿತ್ರಕಲೆಯನ್ನು ಈ ಕ್ಷಣದಿಂದ ಶುರುಮಾಡಿದ್ರೂ ನನಗೆ ಸಿನಿಮಾ ಬೇಕಿಲ್ಲ. ಅದರಲ್ಲಿಯೇ ಇದಕ್ಕಿಂತ ಅದ್ಭುತವಾಗಿ ಬದುಕ್ತೀನಿ. ಸಿನಿಮಾನೂ ಅಷ್ಟೇ. ನನಗಿಷ್ಟವಾದ ಸಿನಿಮಾವನ್ನೇ ಮಾಡುವುದು ನಾನು. ಇನ್ನೊಂದು ಬಗೆಯ ಸಿನಿಮಾಗಳನ್ನೂ ಮಾಡ್ತೀನಿ. ಅದು ಸ್ಟಾರ್ ನಟರ ಜತೆ ಮಾಡುವ ಸಿನಿಮಾಗಳು. ಅಲ್ಲಿರುವ ಸವಾಲು ನನಗಿಷ್ಟ. ದರ್ಶನ್ ಸಿನಿಮಾ ಮಾಡಬೇಕು ಅಂತ ಇಷ್ಟ ಇದೆ. ಯಶ್ ಜೊತೆಯೂ ಮಾಡಲು ಆಸೆ ಇದೆ. ಸುದೀಪ್ ಅವರಿಗೆ ಎಷ್ಟು ಅಭಿಮಾನಿಗಳಿದ್ದಾರಲ್ಲಾ, ಅವರನ್ನು ಗುರಿಯಾಗಿಟ್ಕೊಂಡು ಸಿನಿಮಾ ಮಾಡುವ ಸವಾಲು ನನಗೆ ಬೇಕು. ಆ ಚಾಲೆಂಜ್ ಎದುರಿಗಿಟ್ಕೊಂಡು ವರ್ಷಾನೋ ಆರು ತಿಂಗಳೋ ಒದ್ದಾಡ್ತೀನಿ. ಆಮೇಲೆ ಮತ್ತೆ ನನ್ನಿಷ್ಟದ ಸಿನಿಮಾ ಮಾಡ್ತೀನಿ. ಹಾಗೆ ವಾಪಸ್ ಬರುವ ಕ್ಲಾರಿಟಿ ಇದೆ.

● **ನಿಮ್ಮ ಸಿನಿಮಾಗಳಲ್ಲಿ ನಾಯಕರ ಕಥೆಗಳನ್ನೇ ಹೇಳ್ಕೊಂಡು ಬಂದಿದ್ದೀರಿ. ಆದರೆ ಅದಕ್ಕೆ ಪರ್ಯಾಯವಾಗಿ ನಾಯಕಿಯರ ಪಾತ್ರಗಳೂ ತುಂಬ ಗಟ್ಟಿಯಾದ ಪಾತ್ರಗಳು. ಮಹಿಳಾ ಪಾತ್ರಗಳನ್ನು ಅಷ್ಟು ಘನತೆಯಿಂದ ಚಿತ್ರಿಸಲು ಸಾಧ್ಯವಾಗಿದ್ದು ಹೇಗೆ?**

ನಾನೇನೂ ಓದಿಲ್ಲ, ಅಮ್ಮನನ್ನು ನೋಡಿದೀನಿ ಅಷ್ಟೆ! ನನ್ನ ತಾಯಿ ನನ್ನ ನಂಬಿಕೆಯ ಮೂಲ. ನನ್ನ ಅಕ್ಕ, ಅತ್ತಿಗೆ, ನನ್ನ ಪ್ರೇಯಸಿಯರು, ನನ್ನ ಹೆಂಡತಿ, ಗೆಳತಿಯರು ಎಲ್ಲರಲ್ಲಿಯೂ ನಾನು ಕಾಣುವುದು ಪ್ಯೂರ್ ಹೆಣ್ಣು. ಅವರ ಪರಿಸ್ಥಿತಿಗೆ ತಕ್ಕಂಗೆ ಮಾತಾಡ್ತಾರೆ ಅವರು. ಅವರಾರೂ ಕೆಟ್ಟವರಲ್ಲ. ಬದುಕಿಗೆ ಅಡ್ಜೆಸ್ಟ್ ಆಗ್ತಾ ಹೋಗ್ತಾರೆ. ನನ್ನ ತಾಯಿಯನ್ನೇ ಎಲ್ಲ ಹೆಣ್ಣು ಪಾತ್ರಗಳಲ್ಲಿಯೂ ಹುಡುಕಲು ಪ್ರಯತ್ನಿಸ್ತೀನಿ. ಕೆಲವೊಮ್ಮೆ ಸಿಗುತ್ತೆ, ಇನ್ನು ಕೆಲವು ಸಲ ಸಿಗಲ್ಲ. ನಾನು ನನ್ನ ಸಿನಿಮಾಗಳಲ್ಲಿ ಮಹಿಳಾ ಪಾತ್ರಗಳನ್ನು ಬೇಕಾದಾಗ ಬಳಸಿ ಬಿಸಾಕುವುದಿಲ್ಲ. ನನ್ನ ತಾಯಿ, ಅಕ್ಕ, ಅತ್ತಿಗೆ, ಹೆಂಡತಿ ಯಾರೂ ನನ್ನ ಬದುಕಲ್ಲಿ ಬಳಸಿ ಬಿಸಾಕುವ ಕ್ಯಾರೆಕ್ಟರುಗಳಲ್ಲ! ಸಿನಿಮಾದಲ್ಲಿಯೂ ಹಾಗೆ.

● **ಎಷ್ಟು ದಿನ ಬಿರಿಯಾನಿಯನ್ನೇ ಮಾಡ್ತಾ ಇರ್ತೀರಿ? ಬದಲಾವಣೆ ಬೇಕು ಅನ್ನಿಸುವುದಿಲ್ಲವಾ?**

ನನಗೆ ಬರುವುದು ಅದೊಂದೇ. ನಾನು ಸಾಯುವವರೆಗೂ ಬಿರಿಯಾನಿಯನ್ನೇ ಮಾಡಿ ಸಾಯೋದು. ಮಧ್ಯದಲ್ಲಿ ಯಾವುದೋ ಪೂಜೆಯ ಪ್ರಸಾದ ಮಾಡೊಲ್ಲ. ಬೇಳೆ ಬಾತ್ ಮಾಡ್ಕೊಡು ಅಂದ್ರೂ ಮಾಡಲ್ಲ. ನಾನು ನಿರಂತವಾಗಿ ಹಲವು ರುಚಿಗಳ ಬಿರಿಯಾನಿಗಳನ್ನೇ ಮಾಡುವುದು. ನಾನು ಹೋಗ್ಬೇಕಾದ್ರೆ ಜನರಿಗೆ ಅದೇ ಕಾಣಿಸ್ಬೇಕು. ಹಾಗಾದ್ರೆ ವೆಜ್‌ನವರಿಗೆ ಏನು ಮಾಡ್ತೀರಾ ಕೇಳಿದ್ರೆ ಸಾರಿ ಅಂತೇನೆ. ನಾನು ಇಡೀ ಮನುಷ್ಯಕುಲಕ್ಕೆ ಸಿನಿಮಾ ಮಾಡ್ತೀನಿ.

ಸೂರಿ ಈಸ್ ಎ ಬಿರಿಯಾನಿ ಸ್ಪೆಷಲಿಸ್ಟ್! ಥ್ಯಾಂಕ್ಯೂ...

⌘